64/83 25 x 3

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ಕಾಅ(ಮೂಸೌವಿ)/ಹರಾಜು(ಉಪಹಾರ ಕೇಂದ್ರ)/142509/2021-22 ದಿನಾಂಕ: 15.04.2021

## ಟೆಂಡರ್ ಹಾಗೂ ಬಹಿರಂಗ ಹರಾಜು ಪ್ರಕಟಣೆ ದಿನಾಂಕ: 15.04.2021

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರಕ ಕಟ್ಟಡ ಪಕ್ಕದಲ್ಲಿ ಹೊಸದಾಗಿ ನಿರ್ಮಿಸಿರುವ ಉಪಹಾರ ಕೇಂದ್ರಕ್ಕೆ ಹರಾಜು ಮೂಲಕ ಉಪಹಾರ ಕೇಂದ್ರ ನಡೆಸುವ ಬಾಡಿಗೆಯನ್ನು ನಿಗಧಿಪಡಿಸಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿಸ್ತೀರ್ಣ ಚ.ಮೀ.ಗಳಲ್ಲಿ | ಪ್ರತಿ ಮಾಹೆಯಾನ ಕನಿಷ್ಠ ಬಾಡಿಗೆ / ಕನಿಷ್ಠ ಬಿಡ್ ನ ಮೊತ್ತ | ಇ.ಎಂ.ಡಿ ಮೊತ್ತ |
|---|---|---|---|
| 1 | 66.65 | 77636+ಜಿಎಸ್‌ಟಿ 18% | ರೂ. 10,000.00 |

ಡಿಡಿ ಯನ್ನು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೆಸರಿಗೆ ನೀಡುವುದು. ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **29.04.2021.** ಖಾಲಿ ಟೆಂಡರ್ ಫಾರಂನ್ನು ವಿತರಿಸುವ ವೇಳೆ: **15.04.2021 ರಿಂದ 28.04.2021 ಸಂಜೆ 4.00 ರವರೆಗೆ.** ಟೆಂಡರ್ ಫಾರಂನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ಕೊನೆಯ ದಿನಾಂಕ: **30.04.2021.** ಬಹಿರಂಗ ಹರಾಜು ದಿನಾಂಕ: **03.05.2021, ಬೆಳಿಗ್ಗೆ 11.00 ಗಂಟೆಗೆ.**

**ಬಹಿರಂಗ ಹರಾಜಿನ ಸಾಮಾನ್ಯ ಷರತ್ತುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.**

1. ಬಿಡ್‌ದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 1984 ರ ನಿಯಮಾವಳಿಯನ್ನು ಪಾಲಿಸಬೇಕಾಗುತ್ತದೆ.
2. ಬಿ.ಬಿ.ಎಂ.ಪಿ ಯ ಹೋಟೆಲ್ ನ್ನು ನಡೆಸಲು ಪರವಾನಗಿಯನ್ನು ಪಡೆಯತಕ್ಕದ್ದು.
3. ಸದರೀ ಉಪಹಾರ ಕೇಂದ್ರದ ಕಟ್ಟಡಕ್ಕೆ ಕಲ್ಪಿಸಲಾಗಿರುವ ನೀರು ಸರಬರಾಜು ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕಗಳ ಸರಬರಾಜು ವೆಚ್ಚವನ್ನು ಉಪಹಾರ ಕೇಂದ್ರದ ಯಶಸ್ವಿ ಬಿಡ್ಡುದಾರರೇ ಭರಿಸತಕ್ಕದ್ದು.
4. ಯಶಸ್ವಿಯಾದ ಬಿಡ್‌ದಾರರು ಉಪಹಾರ ಕೇಂದ್ರಕ್ಕೆ ಬೇಕಾಗಿರುವ ಅಡಿಗೆ ಪಾತ್ರೆಗಳು, ಗ್ಯಾಸ್ ಸಿಲೆಂಡರ್, ಗ್ಯಾಸ್ ಸ್ಟವ್, ಹೊಗೆ ಹೋಗುವುದಕ್ಕೆ ಚಿಮಿಣಿ ಮತ್ತು ಊಟದ ಪೀಠೋಪಕರಣಗಳನ್ನು ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳುವುದು.
5. ಸದರಿ ಉಪಹಾರ ಕೇಂದ್ರದ ಕಟ್ಟಡದಲ್ಲಿ ರಿಟೇಲ್ ವ್ಯಾಪಾರ ಮತ್ತು ಇತರೇ ವಾಣಿಜ್ಯ ವಹಿವಾಟುಗಳನ್ನು ಕೈಗೊಳ್ಳಬಾರದು.
6. ಸದರಿ ಉಪಹಾರ ಕೇಂದ್ರದ ಕಟ್ಟಡ Drive Way ನಲ್ಲಾಗಲಿ ಅಥವಾ Set back ನಲ್ಲಾಗಲಿ ಯಾವುದೇ ರೀತಿಯ ಒತ್ತುವರಿ ಮಾಡತಕ್ಕದಲ್ಲ.
7. ಕಟ್ಟಡಕ್ಕೆ ಹೆಚ್ಚುವರಿಯಾಗಿ ವಿದ್ಯುತ್ ಬಳಕೆ ಮಾಡಬೇಕಾದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಹೆಚ್ಚುವರಿ ಬೇಡಿಕೆಗೆ ಮಂಜೂರಾತಿ ಪಡೆದುಕೊಳ್ಳತಕ್ಕದ್ದು.
8. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
9. ಯಶಸ್ವಿ ಬಿಡ್ಡುದಾರರು ಹಂಚಿಕೆಯಾದ ಉಪಹಾರ ಕೇಂದ್ರವನ್ನು 1 ವರ್ಷಕ್ಕೆ ಮಾತ್ರ ಬಾಡಿಗೆ ರೂಪದಲ್ಲಿ ನೀಡಲಾಗುವುದು.
10. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಇಎಂಡಿ ಮೊತ್ತ / ಆರಂಭಿಕ ಠೇವಣಿ ರೂ. 1,00,000/- (ಒಂದು ಲಕ್ಷ ರೂ ಮಾತ್ರ) ಗಳನ್ನು ಡಿ.ಡಿ ರೂಪದಲ್ಲಿ ಹರಾಜು ಪ್ರಾರಂಭಗೊಳ್ಳುವ ಮುನ್ನ ಸಲ್ಲಿಸುವುದು.
11. ಯಶಸ್ವಿ ಬಿಡ್‌ದಾರರು ಜಿ.ಎಸ್.ಟಿ ಮೊತ್ತವನ್ನು ಪಾವತಿಸತಕ್ಕದ್ದು.
12. ವಿಳಾಸದ ಸಾಬೀತಿಗಾಗಿ ಗೆಜೆಟೆಡ್ ಅಧಿಕಾರಿ/ನೋಟರಿಯಿಂದ, ಅನಿವಾಸಿ ಭಾರತೀಯ (ಎನ್.ಆರ್.ಐ) ರಾಗಿದ್ದಲ್ಲಿ ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡ ಕೆಳಕಂಡ ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬೇಕು.
13. ಎ) ಮತದಾರರ ಗುರುತಿನ ಚೀಟಿ, ಬಿ) ವಾಹನ ಚಾಲನೆಯ ಪರವಾನಗಿ, ಸಿ) ಪಾಸ್ ಪೋರ್ಟ್, ಡಿ) ವಿಶಿಷ್ಟ ಗುರುತಿನ (ಆಧಾರ್) ಸಂಖ್ಯೆ
14. ಪಾನ್ ಸಂಖ್ಯೆ (ಗೆಜೆಟೆಡ್ ಅಧಿಕಾರಿ / ನೋಟರಿಯಿಂದ, ಭಾರತೀಯ ಅನಿವಾಸಿಯಾಗಿದ್ದಲ್ಲಿ ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು).
15. ಭಾವಚಿತ್ರದ ಗುರುತು (ಗೆಜೆಟೆಡ್ ಅಧಿಕಾರಿ/ನೋಟರಿಯಿಂದ, ಭಾರತೀಯ ಅನಿವಾಸಿಯಾಗಿದ್ದಲ್ಲಿ ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು) - ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ.
16. ರುಜು ನಮೂನೆ (ಗೆಜೆಟೆಡ್ ಅಧಿಕಾರಿ / ನೋಟರಿಯಿಂದ, ಭಾರತೀಯ ಅನಿವಾಸಿಯಾಗಿದ್ದಲ್ಲಿ ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು) - ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ.
17. ಇ-ಮೇಲ್ ವಿಳಾಸ.
18. ಮೊಬೈಲ್ ದೂರವಾಣಿ ಸಂಖ್ಯೆ
19. ಸ್ಥಿರ ದೂರವಾಣಿ ಸಂಖ್ಯೆ
20. ಯಶಸ್ವಿ ಬಿಡ್‌ದಾರರಿಗೆ ತಿಂಗಳ ಬಾಡಿಗೆ ನಿಗಧಿಯಾದ ನಂತರ 10 ತಿಂಗಳ ಬಾಡಿಗೆ ಮೊತ್ತವನ್ನು ಮುಂಗಡ ಹಣವಾಗಿ ಪಾವತಿಸಬೇಕಾಗಿರುತ್ತದೆ. ಅದರಲ್ಲಿ ಶೇ. 25 ರಷ್ಟು ಮೊತ್ತವನ್ನು ಬಿಡ್ ದಿನಾಂಕದಿಂದ 72 ಗಂಟೆ ಒಳಗೆ ಆಯುಕ್ತರು, ಬಿಡಿಎ ರವರ ಕೆಳಕಂಡ ಖಾತೆಗೆ ಜಮಾ ಮಾಡಿ ಚಲನ್ ನ್ನು ಆರ್ಥಿಕ ವಿಭಾಗದ ಹರಾಜು ಶಾಖೆಗೆ ಸಲ್ಲಿಸತಕ್ಕದ್ದು. (ಆರಂಭಿಕ ಠೇವಣಿ ಮೊತ್ತವನ್ನು ಒಳಗೊಂಡಂತೆ)
21. ಬ್ಯಾಂಕ್ ಹೆಸರು :- ಚಾಲ್ತಿ ಖಾತೆ ಸಂಖ್ಯೆ : - 2828201002001, ಕೆನರಾ ಬ್ಯಾಂಕ್, ಬಿಡಿಎ ಶಾಖೆ, ಐ.ಎಫ್.ಎಸ್.ಸಿ. ಕೋಡ್:- CNRB0002828, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560020.
22. ಯಾವುದೇ ಬಿಡ್ಡನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಬಿಡಿಎ ಹೊಂದಿರುತ್ತಾರೆ. ಆಯುಕ್ತರ ನಿರ್ಧಾರವೇ ಅಂತಿಮ.
23. ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಕಛೇರಿ ಅವಧಿಯಲ್ಲಿ ಪ್ರಾಧಿಕಾರದ ಕೇಂದ್ರ ಕಛೇರಿಗೆ ಭೇಟಿ ನೀಡಬಹುದು.

**ಹರಾಜು ನಡೆಸುವ ಸ್ಥಳ:-** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿ, ಕುಮಾರ ಪಾರ್ಕ್ ಪಶ್ಚಿಮ ಬಡಾವಣೆ, ಟಿ.ಚೌಡಯ್ಯ ರಸ್ತೆ, ಬೆಂಗಳೂರು-560 020. **ದಿನಾಂಕ: 28.04.2021. ಸಮಯ: ಬೆಳಿಗ್ಗೆ 11.00 ಗಂಟೆ.**

ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಅಭಿಯಂತರರನ್ನು ಸಂಪರ್ಕಿಸಿ.

**1. ಶ್ರೀ ಆರ್ ಕೆ ಮೋಹನ್ (ಕಾ.ಅ) : 9902063339**

**2. ಶ್ರೀ ಆರ್ ಸುರೇಶ್ (ಸ.ಕಾ.ಅ) : 9449377654**

**ಸಹಿ/- ಕಾರ್ಯಪಾಲಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು**